ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ

**ಸ್ಪೆಷಲ್ (Electricity) ಕೇಸ್: 18/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ವಿನಯ್ ಕುಮಾರ್ | ಫ್ರಾಸಾ- 3 |
| ತಂದೆಯ ಹೆಸರು | : | ಕುಮಾರಪ್ಪ | ಚಾಸಾ- 4 |
| ವಯಸ್ಸು | : | 42 ವರ್ಷ | |
| ವೃತ್ತಿ | : | AEE, CHESCOM, ಮಡಿಕೇರಿ | |
| ವಾಸ | : | ಮಡಿಕೇರಿ | |

ಸಾಕ್ಷಿಯನ್ನು ದಿನಾಂಕ **12-03-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದ</u>:

ನಾನು ಕುಶಾಲನಗರದಲ್ಲಿ 2013 ರಿಂದ 2021 ರವರೆಗೆ ಸಹಾಯಕ ಇಂಜಿನಿಯರ್ ಆಗಿ ಸೇವೆ ಸಲ್ಲಿಸಿರುತ್ತೇನೆ.

ದಿನಾಂಕ 29.07.2021 ರಂದು ಪೊಲೀಸರು ನನಗೆ ನೋಟಿಸನ್ನ ಜಾರಿ ಮಾಡಿದರು, ಹೊಸಕಾಡು ಬಸವನಹಳ್ಳಿ ಗ್ರಾಮದ ಚಂದ್ರ ರವರ ಜಮೀನ್ ಬಳಿ ಬರುವಂತೆ ನೋಟಿಸ್ ನೀಡಿದರು ಸದರಿ ನೋಟಿಸನ್ನ ನಿಪಿ-**10** ಎಂದು ಗುರುತಿಸಲಾಯಿತು. ಆ ಪ್ರಕಾರ ನಾನು ಸ್ಥಳಕ್ಕೆ ಹೋದೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಒಂದು ಆನೆ ಸತ್ತು ಬಿದ್ದಿತ್ತು, ಆನಂತರ ನನ್ನನ್ನ ಚಂದ್ರ ರವರ ಮನೆ ಬಳಿ ಕರೆದುಕೊಂಡು ಹೋದರು. ಚಂದ್ರ ರವರ ಜಮೀನಿನ ಸುತ್ತ ಸೋಲಾರ್ ತಂತಿಯನ್ನ ಅಳವಡಿಸಿದ್ದರು. ಆರೋಪಿ ತನ್ನ ಮನೆಯ ವಿದ್ಯುತ್ ಸಂಪರ್ಕದಿಂದ ಬ್ಯಾಟರಿಗೆ ಚಾರ್ಜ್ ಮಾಡಿ ಅದರಿಂದ ಸೊಲಾರ್ energizer ನ್ನು ಬಳಸಿ ಆ ಮೂಲಕ ಸೋಲಾರ್ ವಿದ್ಯುತ್ ತಂತಿಯನ್ನ ಹರಿಸಿದ್ದರು, ಆದರೆ ಸೋಲಾರ್ ಪ್ಯಾನಲನ್ನ ಅವರು ಅಳವಡಿಸಿರಲಿಲ್ಲ. ಪೊಲೀಸರು ಸ್ಥಳದಿಂದ ಬ್ಯಾಟರಿ, ಸೋಲಾರ್ energizer, ಅಲ್ಯುಮಿನಿಯಂ ವೈಯರ್, ಜಿ ಐ ವೈಯರ್, ಇವುಗಳನ್ನ ತೆಗೆದುಕೊಂಡರು. ಆನೆ ಸತ್ತು ಬಿದ್ದ ಜಾಗದಲ್ಲಿ ವೈಯರ್ ಕಾಲಿಗೆ ಎದೆಗೆ ತಾಗಿಕೊಂಡಿತ್ತು. ಆನೆಯ ಎದೆಗೆ ತಾಗಿದ್ದ ತಂತಿ ಮತ್ತು ಮನೆಯಿಂದ ವಶಪಡಿಸಿಕೊಂಡಿದ್ದ ತಂತಿ ಇವುಗಳನ್ನ

ನೋಡಿ ಗುರುತಿಸಿದ್ದೇನೆ ಅವುಗಳು ಈಗಾಗಲೇ ಮುಮಾ-1 ರಿಂದ ಮುಮಾ-5 ಎಂದು ಗುರುತಿಸಲಾಗಿದೆ. ಆರೋಪಿ ಮನೆ ಬಳಿ ಮಹಜರು ಬರೆದಾಗ ನಾನು ಹಾಜರಿದ್ದು, ಸಹಿ ಮಾಡಿದ್ದೇನೆ ಅದು ನಿಪಿ-4 ಇದ್ದು, ಸಹಿ ನಿಪಿ**-4(ಸಿ)** ಎಂದು ಗುರುತಿಸಲಾಯಿತು. ಮಹಜರು ಕಾಲಕ್ಕೆ ಪೊಲೀಸರು ಸ್ಥಳದಲ್ಲಿ ಪೊಟೋ ತೆಗೆದಿರುತ್ತಾರೆ ಅದು ನಿಪಿ-3 ಎಂದು ಗುರುತಿಸಲ್ಪಟ್ಟಿದೆ. ಈ ಸಂಬಂಧ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀಸವಾಲು- ಆರೋಪಿ ಪರವಾಗಿ ಶ್ರೀ ಆರ್.ಎಲ್ ವಕೀಲರಿಂದ:</u>

ನನಗೆ ಸ್ಥಳಕ್ಕೆ ಬರುವಂತೆ ಬೆಳಿಗ್ಗೆ 10 ಗಂಟೆಗೆ ನೋಟಿಸ್ ಕೊಟ್ಟರು. ಆ ಸಮಯದಲ್ಲಿ ನಾನು ನಮ್ಮ ಕಛೇರಿಯಲ್ಲಿ ಇದ್ದೆ, ನಾನು ಸ್ಥಳಕ್ಕೆ ಬಂದಾಗ 12-30 ಸಮಯ ಆಗಿತ್ತು. ಮಹಜರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಮಹಜರು ಕಾಲದ ಚೆಕ್ಕು ಬಂದಿ ಹೇಳಲು ಆಗುವುದಿಲ್ಲ. ಮಹಜರು ಮಾಡಿದಾಗ ಮಧ್ಯಾಹ್ನ 1 ರಿಂದ 3 ಗಂಟೆ ಸಮಯ ಆಗಿತ್ತು. ಸೋಲಾರ್ ತಂತಿ ಸೊಂಡಿಲು ಭಾಗದಲ್ಲಿ ಸುತ್ತಿಕೊಂಡಿತ್ತು. ಸದರಿ ತಂತಿ ಎಷ್ಟು ಮೀಟರ್ ಇತ್ತು ಎಂದು ನನಗೆ ಹೇಳಲು ಆಗುವುದಿಲ್ಲ. ಎಷ್ಟು ಸುತ್ತು ಸೊಂಡಲಿಗೆ ಸುತ್ತಿತ್ತು ಎಂದು ಹೇಳಲು ಆಗುವುದಿಲ್ಲ. ಮನೆಯಿಂದ ಸುಮಾರು 40 ರಿಂದ 60 ಮೀಟರ್ ದೂರದಲ್ಲಿ ಆನೆ ಬಿದ್ದಿತ್ತು. ನಕಾಶೆಯಲ್ಲಿ ಯಾವುದೇ ವೈಯರನ್ನ ತೋರಿಸಿಲ್ಲ ಎಂದರೆ ಸರಿ. ವೈಯರ್ ಗಳನ್ನ ಅಮಾನತುಪಡಿಸಿಕೊಂಡಾಗ ನನ್ನ ಸಹಿಯನ್ನೇನು ಪಡೆದಿರುವುದಿಲ್ಲ. ಚಾರ್ಜರ್ ಮತ್ತು energizer ಮೇಲೆ ನನ್ನ ಸಹಿ ಪಡೆದಿದ್ದಾರೋ ನನಗೆ ನೆನಪಿಲ್ಲ. ಮನೆ ಯಾರಿಗೆ ಸೇರಿತು ಎಂಬ ಬಗ್ಗೆ ವಿದ್ಯುತ್‌ಚಕ್ತಿ ವಿಭಾಗಕ್ಕೆ ನಾನೇನು ಮಾಹಿತಿ ಕೊಟ್ಟಿಲ್ಲ. ಇದೇ ವೈಯರನ್ನ ಅಮಾನತುಪಡಿಸಿಕೊಂಡಿರುವ ಬಗ್ಗೆ ಯಾವುದೇ ವಿಶೇಷ ಗುರುತು ಇಲ್ಲ ಎಂದರೆ ಸರಿ. ಮುಮಾ-1 ರಿಂದ ಮುಮಾ-5 ನ್ನು ನಾನು ಇದೇ ಮೊದಲ ಬಾರಿಗೆ ನ್ಯಾಯಾಲಯದಲ್ಲಿ ನೋಡಿರುವುದು ಎಂದರೆ ಸರಿಯಲ್ಲ. ಪೊಲೀಸರು ಯಾವುದೇ ಮಹಜರು ಮಾಡಿಲ್ಲ, ನಾನು ಠಾಣೆಯಲ್ಲಿ ರುಜು ಮಾಡಿದ್ದೇನೆ ಎಂದು ಹೇಳುವುದು ಸರಿಯಲ್ಲ. ಮುಮಾ-1 ರಿಂದ ಮುಮಾ-4 ನ್ನು ಆರೋಪಿ ಮನೆಯಿಂದ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಪೊಲೀಸರ ಕೋರಿಕೆ ಮೇರೆಗೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆ ದಿನ ವಿದ್ಯುತ್ ಸಂಪರ್ಕ ಇತ್ತೆ ಇಲ್ಲವೊ ಎಂಬ ಬಗ್ಗೆ ಪೊಲೀಸರು ನನ್ನ ಮುಂದೆ ಯಾವುದೇ ಮಾಹಿತಿ ಪಡೆದಿಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ.ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.